ತುರುವೇಕೆರೆ ಪ್ರಸಾದ್
ಚಿತ್ರಗಳು: ಗಣೇಶ ಅರಳೀಕಟ್ಟೆ

## ಹೆಂಡತಿ ಹೇಳಿದ್ದು!

ಹತ್ತೊಂಬತ್ತು ವರ್ಷ
ದಿನಕ್ಕೊಂದು ಸ್ಯಾರಿ
ಕೊಡಿಸಿದ್ದಾರೆ
ತೆರಿಗೆ ಅಧಿಕಾರಿ!
ಜೊತೆಗೆ ನೆರಿಗೆಗೊಂದು
2 ಸಾವಿರ ನೋಟಿನ ಗರಿ!
ಈಗಾಗಿದೆ 7 ಸಾವಿರ ಮೀರಿ!
ನೀವೂ ಇದ್ದೀರಿ
ಸೀರೆ ಅಂದ್ರೆ ಓಡ್ತೀರಿ ಹಾರಿ
ನೀವೆಂಥ ಗಂಡ ರೀ?





## ಹರಾಜು!

ಐಪಿಎಲ್‌ನಲ್ಲಿ
ಖ್ಯಾತ ಕ್ರಿಕೆಟಿಗ
ಆಗಲಿಲ್ಲ ಹರಾಜು!
ಮನೆ ಬಾಗಿಲಲ್ಲೇ
ಹೆಂಡತಿ
ಹಾಕಿದಳು ಹರಾಜು!

## ದುಬಾರಿ ದರ್ಶನ!

ಸಾವಿರ ಐನೂರು
ನೋಟ್‌ಬ್ಯಾನ್
ತಿರುಪತಿ ತಿಮ್ಮಪ್ಪನ
ಆದಾಯವೂ ಭಾರೀ ಡೌನ್!
ಬೀಳುತ್ತಿಲ್ಲ ಹುಂಡಿಗೆ
ಕೋಟಿ ಕೋಟಿ ಹಣ
ಬಂಗಾರ ಮಣ ಮಣ
ಆಗಲಿದೆ ದುಬಾರಿ
ಎಂಟ್ರೆನ್ಸ್ ಫೀ!
ಕಮ್ಮಿಯಾಗಲಿದೆ
ಲಡ್ಡುವಿನಲಿ ಘೀ!(ತುಪ್ಪ)






## ಕಾಣಿಕೆ -ಒನಕೆ

ಡೈರಿಯಲ್ಲಿ
ಬರೆಯಬಾರದು
ಹೈಕಮಾಂಡ್‌ಗೆ ಕೊಟ್ಟ ದೇಣಿಗೆ
ಪ್ರೇಯಸಿಗೆ ಕೊಟ್ಟ ಕಾಣಿಕೆ
ಬೀಳಬಾರದು ಬಲೆಗೆ
ಹಾಕಬೇಕು ಒಲೆಗೆ!
ಗ್ರಹಚಾರ ಕೆಟ್ಟರೆ
ಬೀಳುತ್ತೆ ಐಟಿ ಕುಣಿಕೆ
ಮನೆಯೊಡತಿ
ಕೈಗೆತ್ತಿಕೊಳ್ಳುತ್ತಾಳೆ ಒನಕೆ!

## ಮರೆತ ವಚನ!



ರಾಜಕೀಯದ ಜನ
ನಾಯಿ, ನರಿ, ಹೆಗ್ಗಣ, ದನ
ಎಂದು ಬೈದಾಡ್ತಾರೆ ದಿನಾ!
ಬಳಸುತ್ತಾರೆ ಏಕವಚನ
ಕೆಸರೆರಚಾಡದಿರೆ
ತಿಂದಿದ್ದಾಗದು ಪಚನ!
ಮರೆತೇ ಬಿಟ್ಟಿದ್ದಾರೆ
ಮತದಾರರಿಗೆ ಕೊಟ್ಟ ವಚನ!
ಮಲಗಿ ಬಿಟ್ಟಿದ್ದಾನೆ
ಜನತಾ ಜನಾರ್ಧನ!